**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

**ಸಂಖ್ಯೆ:** ತಾಂ.ಶಿ.ನಿ 8 ಸಿ.ಡಿ.ಸಿ 2022 ( ಕ.ನಂ 964682)

**ಆಯುಕ್ತರ ಕಛೇರಿ**
**ತಾಂತ್ರಿಕ ಶಿಕ್ಷಣ ಭವನ,**
**ಅರಮನೆ ರಸ್ತೆ, ಬೆಂಗಳೂರು-1**
**ದಿನಾಂಕ: 19.12.2022**

## ಸುತ್ತೋಲೆ

ವಿಷಯ: ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ '**ಸುಶಾಸನ ಮಾಸ**'**ದ** ಅಂಗವಾಗಿ ಉತ್ತಮ ಪ್ರಶಸ್ತಿಗಳನ್ನು ನೀಡುವ ಕುರಿತು.

......

ಸುಶಾಸನ ಅಥವಾ ಉತ್ತಮ ಆಡಳಿತ (Good Governance) ರಾಷ್ಟ್ರದ ಮತ್ತು ರಾಜ್ಯದ ಪ್ರಗತಿ, ಸುಸ್ಥಿರತೆ ಹಾಗೂ ಸಮೃದ್ಧಿಗೆ ಅತ್ಯಗತ್ಯವಾಗಿರುತ್ತದೆ. ಡಿಸೆಂಬರ್ 25 ನೇ ದಿನಾಂಕವನ್ನು ಸರ್ಕಾರ '**ಸುಶಾಸನ ದಿವಸ**' ಎಂದು ಘೋಷಿಸಿ ಪ್ರತಿ ವರ್ಷ ಆಚರಿಸುತ್ತಿದೆ. ಈ ವರ್ಷವೂ ಉನ್ನತ ಶಿಕ್ಷಣ ಇಲಾಖೆಗೆ ಒಳಪಡುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ '**ಸುಶಾಸನ ಮಾಸ**'**ದ** ಅಂಗವಾಗಿ ಸಂಸ್ಥೆಗಳಿಗೆ ವಿವಿದ ಪ್ರಶಸ್ತಿಗಳನ್ನು ನೀಡಲು ಉದ್ದೇಶಿಸಲಾಗಿದೆ.

ಸದರಿ ವಿಷಯವಾಗಿ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ವಿವಿಧ ಪ್ರಶಸ್ತಿಗಳಿಗೆ ಭಾಜನರಾಗಲು ಈ ಕೆಳಕಂಡ ಕೋಷ್ಟಕದಲ್ಲಿ ಸೂಚಿಸಿದಂತೆ ಸಂಬಂದಧಿಸಿದ ಎಲ್ಲಾ ಮಾಹಿತಿಗಳನ್ನು ದೃಢೀಕರಣದೊಂದಿಗೆ ಇಲಾಖೆಯ ಇಮೇಲ್ ವಿಳಾಸ: dtegoodgovernance2022@gmail.com ಗೆ **ದಿನಾಂಕ: 21-12-2022 ರ ಅಪರಾಹ್ನ :5.00 ಗಂಟೆಯೊಳಗೆ ಅತಿಜರೂರು** ಎಂದು ಪರಿಗಣಿಸಿ ತಪ್ಪದೇ ಕಳುಹಿಸಲು ಸೂಚಿಸಲಾಗಿದೆ.

ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

**ಜಂಟಿ ನಿರ್ದೇಶಕರು-ಸಿಡಿಸಿ**

**ಇವರಿಗೆ:**

1. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು -- ಸೂಕ್ತ ಕ್ರಮಕ್ಕಾಗಿ
2. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು –ಇಲಾಖೆಯ ವೆಬ್ ಸೈಟಿನಲ್ಲಿ ಪ್ರಕಟಿಸುವುದಕ್ಕಾಗಿ
3. ಕಛೇರಿ ಪ್ರತಿ

## ಕೋಷ್ಟಕ

| ಕ್ರ.ಸಂ | ಪ್ರಶಸ್ತಿಗಳ ವಿವರ | ಪ್ರಶಸ್ತಿಗಾಗಿ ಇಲಾಖೆಗೆ ಸಲ್ಲಿಸಬೇಕಾದ ಮಾಹಿತಿಗಳು |
|---|---|---|
| 1 | ಅತ್ಯುತ್ತಮ ಪಾಲಿಟೆಕ್ನಿಕ್ | ಇನ್‌ಟೇಕ್ ಮತ್ತು ಪ್ರವೇಶಾತಿ |
| | | ಕರ್ನಾಟಕ LMS ಅನುಷ್ಠಾನ |
| | | ಬೋಧನೆಗೆ ಸ್ಮಾರ್ಟ್ ತರಗತಿಗಳ ಬಳಕೆ |
| | | NBA ಗ್ರೇಡ್ |
| 2 | ಅತ್ಯುತ್ತಮ ಪ್ಲೇಸ್ ಮೆಂಟ್ ಸೆಲ್ | ಕೈಗಾರಿಕೆಗಳು/ಸಂಸ್ಥೆಗಳೊಡನೆ ಮಾಡಿಕೊಂಡ ಒಪ್ಪಂದಗಳು |
| | | ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳ ಸಂಖ್ಯೆ |
| | | ಅನ್ ಅಕಾಡೆಮಿ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ |
| | | ಉನ್ನತ ಶಿಕ್ಷಣ ಮತ್ತು ವಿವಿದ ಉದ್ಯೋಗ ಅವಕಾಶಕ್ಕೆ ತರಬೇತಿ ಮತ್ತು ಮಾರ್ಗದರ್ಶನ ಕಾರ್ಯಕ್ರಮಗಳ ಸಂಖ್ಯೆ |
| | | ಸ್ವ-ಉದ್ಯೋಗ ಮತ್ತು ಕೈಗಾರಿಕಾ ಉದ್ಯೋಗಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ನಡೆಸಿದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ |
| 3 | ಅತ್ಯುತ್ತಮ ಪಠ್ಯೇತರ ಚಟುವಟಿಕೆಗಳು | ತಾಲ್ಲೂಕು/ಜಿಲ್ಲೆ/ ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಪ್ರಬಂಧ, ಭಾಷಣ, ಚರ್ಚೆ ಇತ್ಯಾದಿ ಸ್ಪರ್ಧೆಗಳಲ್ಲಿ ಗಳಿಸಿದ ಬಹುಮಾನಗಳು |
| | | ತಾಲ್ಲೂಕು/ಜಿಲ್ಲೆ/ ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಯೋಗ, ಫಿಸಿಕಲ್ ಫಿಟ್ನೆಸ್, ಕ್ರೀಡಾ ಸ್ಪರ್ಧೆಗಳಲ್ಲಿ ಗಳಿಸಿದ ಬಹುಮಾನಗಳು |
| | | ಟಿವಿ/ರೇಡಿಯೋ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ |
| | | ತಾಲ್ಲೂಕು/ಜಿಲ್ಲೆ/ ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ನೀಡಿರುವ ಸಾರ್ವಜನಿಕ ಕಾರ್ಯಕ್ರಮಗಳು |
| | | ತಾಲ್ಲೂಕು/ಜಿಲ್ಲೆ/ ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ NCC/NSS/Red Cross/ Scouts & Guides ವಿದ್ಯಾರ್ಥಿಗಳ ಭಾಗವಹಿಸುವಿಕೆ |
| | | ತಾಲ್ಲೂಕು/ಜಿಲ್ಲೆ/ ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಪ್ರಬಂಧ, ಭಾಷಣ, ಚರ್ಚೆ ಇತ್ಯಾದಿ ಸ್ಪರ್ಧೆಗಳಲ್ಲಿ ಗಳಿಸಿದ ಬಹುಮಾನಗಳು |
| 4 | ಅತ್ಯುತ್ತಮ ಫಲಿತಾಂಶ | ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಫಲಿತಾಂಶದ ಕ್ರೂಡೀಕೃತ ಅಂಕಿ-ಅಂಶ |
| | | ಗಳಿಸಿದ ರಾಂಕ್‌ಗಳು |

| | | |
|---|---|---|
| 5 | ಅತ್ಯುತ್ತಮ ಸಕಾಲ ಸೇವೆ | ಆನ್ ಲೈನ್ ನಲ್ಲಿ ನೀಡಿದ ಸೇವೆಗಳ ಸಂಖ್ಯೆ |
| | | ನಿಗದಿತ ಕಾಲಾವಧಿಯೊಳಗೆ ನೀಡಿದ ಸೇವೆಗಳ ಸಂಖ್ಯೆ |
| | | ಫಲಾನುಭವಿಗಳ ಸಂಖ್ಯೆ |
| 6 | ಅತ್ಯುತ್ತಮ ವಿದ್ಯಾರ್ಥಿ-ಸಹಾಯ ಕಾರ್ಯಕ್ರಮಗಳು | ಕೌನ್ಸೆಲಿಂಗ್ |
| | | ಕುಂದುಕೊರತೆಗಳ ನಿವಾರಣೆ |
| | | ವಿದ್ಯಾರ್ಥಿವೇತನ |
| | | ಕಾಲೇಜು ನಡೆಸಿರುವ ಪೂರಕ ಕೋರ್ಸ್ ಗಳು (ಕೌಶಲ್ಯಾಭಿವೃದ್ಧಿ ಕೋರ್ಸ್‌ಗಳನ್ನು ಒಳಗೊಂಡಂತೆ) |
| | | ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ಉಪಕ್ರಮಗಳು |
| 7 | ಅತ್ಯುತ್ತಮ ಸಮಾಜಸೇವೆ | ಪರಿಸರ ಸಂರಕ್ಷಣೆಗೆ ಕೈಗೊಂಡ ಕ್ರಮಗಳು |
| | | ಸಾಮಾಜಿಕ ಸಮಸ್ಯೆಗಳ ಕುರಿತು ನಡೆಸಿದ ಅಭಿಯಾನಗಳು/ಜಾಗೃತಿ ಕಾರ್ಯಕ್ರಮಗಳು |
| | | ಕೋವಿಡ್-19 ಸಂಬಂಧಿತ ಸೇವೆಗಳು |
| | | ಸಮಾಜ ಸೇವೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು |
| 8 | ಅತ್ಯುತ್ತಮ ಅಭ್ಯಾಸಗಳು | ದತ್ತಿ ಸ್ಥಾಪನೆ |
| | | ಸಾಂಸ್ಥಿಕವಾಗಿ ವಿದ್ಯಾರ್ಥಿಗಳಿಗೆ ಊಟ/ಫೀಸು ನೀಡುವ ಕಾರ್ಯಕ್ರಮಗಳು |
| | | ದಾನಿಗಳಿಂದ ಕಾಲೇಜಿನ ಅಭಿವೃದ್ಧಿಗೆ ಪಡೆದುಕೊಂಡ ನಿಧಿ |
| | | ಸಂಸ್ಥೆಗೆ ಸಂಬಂದಿಸಿದಂತೆ ಕೈಗೊಂಡ ಹಸಿರು ಉಪಕ್ರಮಗಳು |
| | | ಸ್ವಚ್ಛತೆ, ಶುಚಿತ್ವ ಮತ್ತು ಕಾಲೇಜಿನ ಕಟ್ಟಡ/ ಆವರಣವನ್ನು ಅಂದಗೊಳಿಸುವಿಕೆ |